**SL. No. : Y**

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]
Total No. of Questions : 57 ]

**CCE PF**
**CCE PR**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 33-K** **Code No. : 33-K**

# ವಿಷಯ : ದ್ವಿತೀಯ ಭಾಷೆ — ಕನ್ನಡ

# Subject : Second Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಖಾಸಗಿ ಅಭ್ಯರ್ಥಿ + ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Fresh + Private Repeater)**

ದಿನಾಂಕ : 05. 04. 2017 ] [ Date : 05. 04. 2017

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-15 ರವರೆಗೆ ] [ Time : 9-30 A.M. to 12-15 P.M.

ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 57 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

## ವಿಭಾಗ – 'ಎ'

### ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೋಷಕ ಅಧ್ಯಯನ)

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ :** 14 × 1 = 14

1. ಪ್ರಾಣಿಗಳನ್ನು ಸುಲಭವಾಗಿ ಕೊಲ್ಲಲು ಬೇಡನ ಉಪಾಯವೇನಾಗಿತ್ತು ?
2. ಸಾಧನೆಗೆ ಅವಶ್ಯಕವಾದುದು ಯಾವುದು ?
3. ಅಂಧತ್ವವು ಪುಟ್ಟರಾಜರ ಪಾಲಿಗೆ ಏಕೆ ದುರಂತವಾಗಲಿಲ್ಲ ?
4. ರೇಶನ್ ಪದ್ಧತಿಯ ಪ್ರಕಾರ ಏನನ್ನು ಮಾಡುವಂತಿರಲಿಲ್ಲ ?
5. ಲೇಖಕರ ಅಜ್ಜ ಯಾವ ವೃತ್ತಿಯಲ್ಲಿದ್ದರು ?
6. ಅಜ್ಜ ಕಾಯಿದೆಯನ್ನು ಮೀರಿದ್ದು ಏಕೆ ?
7. ರಾಮನ್ ಅವರು ವಾರವಾರವೂ ವ್ಯಾಸಂಗ ಗೋಷ್ಠಿಗಳನ್ನೇಕೆ ಏರ್ಪಡಿಸುತ್ತಿದ್ದರು ?
8. ಬನದ ಗೋಪಾಲ ಯಾರು ?
9. ಮೈಯನ್ನು ಮುಟ್ಟಿಕೊಂಡಾಗ ಗಾಬರಿಯಾಗುವುದೇಕೆ ?
10. ಬಾಹುಬಲಿಗೆ ಭಯವಾಗುವುದಿಲ್ಲವೆ ಎಂದು ಮಗು ಕೇಳಿದ್ದು ಏಕೆ ?
11. ತಿಮಿರಕ್ಕೆ ವೈರಿ ಯಾವುದು ?
12. ಜನಪದ ತ್ರಿಪದಿಯಲ್ಲಿ ಹೆಣ್ಣಿದ್ದ ಮನೆಗೆ ಯಾವುದು ಬೇಡ ಎಂದಿದ್ದಾರೆ ?
13. ವೇಷ ಧರಿಸಿದ ಮೇಲೆ ಹೇಗಿರಬೇಕು ?
14. ಉತ್ತರನು ನಿಟ್ಟೋಟದಲ್ಲಿ ಓಡಿದ್ದು ಏಕೆ ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 15 × 2 = 30

15. ರಾಹುಲ್ ದ್ರಾವಿಡರನ್ನು 'ಗೋಡೆ' ಎಂದು ಕರೆಯಲು ಕಾರಣವೇನು ?
16. ಪುಟ್ಟರಾಜರ ಸೋದರ ಮಾವನು ಇವರನ್ನು ಪಂಚಾಕ್ಷರಿ ಗವಾಯಿಗಳಿಗೆ ಒಪ್ಪಿಸಿದ್ದು ಏಕೆ ?
17. ಪುಟ್ಟರಾಜರನ್ನು ಸಂಕ್ಷಿಪ್ತವಾಗಿ ಪರಿಚಯಿಸಿ.
18. ಪಶ್ಚಿಮ ಘಟ್ಟಗಳ ಉತ್ಪನ್ನಗಳು ನಮ್ಮ ದಿನನಿತ್ಯದ ಬದುಕಿಗೆ ಹೇಗೆ ಸಹಕಾರಿಯಾಗಿವೆ ?
19. "ಎಲ್ಲಿ ಹೋಗ್ಯಾವೋ ಗೆಳೆಯ ಆಕಾಲ" ಎಂಬ ಮಾತು ಲೇಖಕರಿಗೆ ನೆನಪಾಗಲು ಕಾರಣವೇನು ?
20. ರಾಮನ್ನರು ಯಾರೊಬ್ಬರ ಶಿಫಾರಸನ್ನು ನಂಬಿ ಶಿಷ್ಯರನ್ನು ಆಯ್ಕೆ ಮಾಡಿಕೊಳ್ಳುತ್ತಿರಲಿಲ್ಲ. ಏಕೆ ?
21. ತಾಯಿಯು ಜೊತೆಗಿದ್ದರೆ ಬನವೇ ಸೊಗಸು ಎಂದು ಮಗನಿಗನಿಸಿದ್ದು ಏಕೆ ?

22. ಅಂತರಾತ್ಮವು ಯಾವಾಗ ಕಿರುಚಿಕೊಳ್ಳುತ್ತದೆ ?

23. ಬಾಹುಬಲಿಯೂ ಮಗುವೂ ಒಂದೇ ಹೇಗೆ ?

24. ಕವಿ ಸಿ.ಪಿ.ಕೆ.ಯವರು ಪ್ರತಿಯೊಬ್ಬನೂ ತನ್ನ ಕರ್ತವ್ಯವನ್ನು ಹೇಗೆ ಮಾಡಬೇಕೆನ್ನುತ್ತಾರೆ ?

25. 'ಪರಹಿತಕೆ ಬಳಲುವುದೆ ಜೀವನವು' ಹೇಗೆ ?

26. ಅಪ್ಪಯ್ಯನಿಗೆ ಮಕ್ಕಳು ಹೇಗೆ ಹೆಸರು ತರುತ್ತಾರೆ ?

27. ಯುದ್ಧವನ್ನು ಮಾಡದೆಯೆ ಸುಖಪಡಬಹುದೆಂಬುದನ್ನು ಉತ್ತರನು ಹೇಗೆ ಸಮರ್ಥಿಸಿದನು ?

28. ಲೇಖಕರು ಅನ್ನಪೂರ್ಣೆಗೆ ಹೇಳಿದ ಮಾತು ಕೇವಲ ಕೌನ್ಸಿಲಿಂಗ್ ಆಗಿತ್ತು ಹೇಗೆ ?

29. ಸಾವಿತ್ರಿ ಎರಡನೆಯ ಬಾರಿ ದೂರವಾಣಿಯ ಕಡೆಗೆ ಓಡಿದ್ದು ಏಕೆ ?

30. **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** 1 × 3 = 3

ಕೊರಡ ಕೊನರಿಸಿ ......................................................

..........................................................................

..........................................................................

........................................................ ಮತ್ತೇರಿದೆ.

***ಅಥವಾ***

ಯುಗದ ಹಿಂದಿನ ......................................................

..........................................................................

..........................................................................

........................................................ ಸವಿಚೈತ್ರವು.

**ಈ ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** 2 × 3 = 6

31. ಕುವೆಂಪು

32. ಕುಮಾರವ್ಯಾಸ (ಗದುಗಿನ ನಾರಣಪ್ಪ)

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ :** 4 × 3 = 12

33. "ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ."

34. "ನಿನ್ನಲ್ಲಿ ಹತ್ತು ಕಿಲೋವಾಟ್ ಶಕ್ತಿಯ ಬುದ್ಧಿ ಇದೆ."

35. "ನೀನು ಸೋತು ಗೆದ್ದೆ ಅಣ. ನಾನು ಗೆದ್ದು ಸೋತೆನು."

36. 'ನೀರ ಕಂಡಲ್ಲಿ ಮುಳುಗುವರಯ್ಯ.'

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 2 × 4 = 8

37. ಪಶ್ಚಿಮ ಘಟ್ಟಗಳ ನಿಜವಾದ ಪತನ ಹೇಗಾಗುತ್ತಿದೆ ?

***ಅಥವಾ***

ಸಹ್ಯಾದ್ರಿ ಸಹನೆ ಕಳೆದುಕೊಳ್ಳಲು ಕಾರಣವೇನು ? ಇದರ ಪರಿಣಾಮವೇನು ? ವಿವರಿಸಿ.

38. ಎಂ. ಗೋಪಾಲಕೃಷ್ಣ ಅಡಿಗ ಅವರು ಜೀವನ ಸಾರ್ಥಕ್ಯಕ್ಕಾಗಿ ಕೈಗೊಳ್ಳಬೇಕಾದ ಕಾರ್ಯಗಳನ್ನು ಹೇಗೆ ವಿವರಿಸಿದ್ದಾರೆ ?

***ಅಥವಾ***

'ಗುರಿ' ಪದ್ಯದ ಸಾರಾಂಶವನ್ನು ಕವಿಯ ಆಶಯದೊಂದಿಗೆ ವಿವರಿಸಿ.

## ವಿಭಾಗ – 'ಬಿ'

### (ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** 12 × 1 = 12

39. 'ಕೃತಜ್ಞ' ಪದದ ವಿರುದ್ಧಾರ್ಥಕ ಪದ

(ಎ) ಕೃತಕರ್ತೃ (ಬಿ) ಕೃತಾರ್ಥ

(ಸಿ) ಕೃತಘ್ನ (ಡಿ) ಕೃಪಣ

40. 'ರಾಜರ್ಷಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

(ಎ) ಸವರ್ಣದೀರ್ಘ ಸಂಧಿ (ಬಿ) ಗುಣ ಸಂಧಿ

(ಸಿ) ಆಗಮ ಸಂಧಿ (ಡಿ) ವೃದ್ಧಿ ಸಂಧಿ

41. 'ಅರಸ' ಪದದಲ್ಲಿರುವ ಮಾತ್ರೆಗಳ ಸಂಖ್ಯೆ

(ಎ) ಮೂರು (ಬಿ) ಐದು

(ಸಿ) ನಾಲ್ಕು (ಡಿ) ಆರು

42. ಮೂರು ಸಾಲುಗಳಿಂದ ಕೂಡಿರುವ ಪದ್ಯ

(ಎ) ಚೌಪದಿ (ಬಿ) ಷಟ್ಪದಿ

(ಸಿ) ತ್ರಿಪದಿ (ಡಿ) ಸುನೀತ

43. 'ವನ' ಪದದ ತದ್ಭವ ರೂಪ

(ಎ) ಅರಣ್ಯ (ಬಿ) ಕಾಡು

(ಸಿ) ಬಣ (ಡಿ) ಬನ

44. 'ಪ್ರಪಾತ' ಪದದ ಸಮಾನಾರ್ಥಕ ಪದ

(ಎ) ಗುಡ್ಡ (ಬಿ) ಬೆಟ್ಟ

(ಸಿ) ಕಣಿವೆ (ಡಿ) ಜಲಪಾತ

45. 'ಮೂಡಣ' ಪದವು ಈ ಗುಂಪಿಗೆ ಸೇರುತ್ತದೆ

(ಎ) ಸಂಖ್ಯಾ ವಾಚಕ (ಬಿ) ಗುಣ ವಾಚಕ

(ಸಿ) ಸರ್ವನಾಮ (ಡಿ) ದಿಗ್ವಾಚಕ

46. ಕ್ರಿಯಾಪದದ ಮೂಲ ರೂಪ

(ಎ) ಪ್ರತ್ಯಯ (ಬಿ) ಧಾತು

(ಸಿ) ಉಪಸರ್ಗ (ಡಿ) ನಾಮಪ್ರಕೃತಿ

47. 'ಬನ್ನಿಬನ್ನಿ' ಎಂಬುದು ಇದಕ್ಕೆ ಉದಾಹರಣೆ

(ಎ) ದ್ವಿರುಕ್ತಿ (ಬಿ) ಅನುಕರಣಾವ್ಯಯ

(ಸಿ) ಸರ್ವನಾಮ (ಡಿ) ಜೋಡುನುಡಿ

48. 'ಸೇನಾಸಾಗರ' ಪದ ಈ ಅಲಂಕಾರಕ್ಕೆ ಉದಾಹರಣೆಯಾಗಿದೆ

(ಎ) ಉಪಮಾಲಂಕಾರ (ಬಿ) ಶಬ್ದಾಲಂಕಾರ

(ಸಿ) ರೂಪಕಾಲಂಕಾರ (ಡಿ) ದೃಷ್ಟಾಂತಾಲಂಕಾರ

49. 'ಮನೆಯಲ್ಲಿ' ಈ ಪದದ ವಿಭಕ್ತಿ

(ಎ) ದ್ವಿತೀಯಾ (ಬಿ) ಸಪ್ತಮೀ

(ಸಿ) ಷಷ್ಠೀ (ಡಿ) ಪ್ರಥಮಾ

50. 'ಕರ್ಮಧಾರೆಯ' ಸಮಾಸಕ್ಕೆ ಉದಾಹರಣೆ

(ಎ) ಒಕ್ಕೊರಲು (ಬಿ) ಹಿಮ್ಮಡಿ

(ಸಿ) ಅಗ್ರಗಣ್ಯ (ಡಿ) ಕೆಂದಾವರೆ

## ವಿಭಾಗ – 'ಸಿ'

### (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

**ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** 4 × 1 = 4

"ನನ್ನ ತಾಯೀ, ಓ ನನ್ನ ತಾಯೀ" ಎಂದು ಕೂಗಿದ, ಕೂಗಿದಾ, ಬಹಳವಾಗಿ ಕೂಗಿದ. ಆ ರಾಜಕುಮಾರನ ಕೂಗು ಕೇಳಿ ಗಾಳಿಬೀಸುವುದನ್ನೇ ಬಿಟ್ಟು "ಏನಯ್ಯಾ ರಾಜ ?" ಎಂದಿತು. ನೀರು ಹರಿಯುವುದನ್ನೇ ಬಿಟ್ಟು "ಬರಲಿಲ್ಲವೇ ನಿನ್ನ ತಾಯಿ ?" ಎಂದು ಕೇಳಿತು. ಬೆಂಕಿ ಉರಿಯುವುದನ್ನೇ ಬಿಟ್ಟು "ನನ್ನ ಹೊಗೆಯನ್ನು ಕಳಿಸಿ ಹುಡುಕಿಸಿಬಿಡುತ್ತೇನಯ್ಯ ರಾಜಕುಮಾರ. ಅಳಬೇಡಪ್ಪ" ಎಂದಿತು. ಪ್ರಾಣಿಗಳೂ, ಪಕ್ಷಿಗಳೂ ಸುತ್ತನಿಂತು ಕಣ್ಣೀರನ್ನು ಸುರಿಸಿಬಿಟ್ಟವು.

"ಓ ನನ್ನ ತಾಯೀ" ಎಂದು ಕೂಗುತ್ತ ಇದ್ದವರಾರು ? ಹೀಗೆ ಕೇಳಬಹುದಲ್ಲವೆ ? ಕೇಳಪ್ಪ ಕೇಳು 'ಭಾರತ, ಭಾರತ' ಎಂದು ಒಂದು ದೇಶ. ಅಲ್ಲಿ ಭಾರತೀಯರು ಇದ್ದರು, ಅವರು ಒಂದು ಬಗೆಯ ಜನ. ಅವರು ಜೇನುತುಪ್ಪದ ಬಣ್ಣದವರು. ಆ ದೇಶದಲ್ಲಿ ಗಡ್ಡದ ಸಿಂಹ, ಪಟ್ಟೆ ಹುಲಿ, ಕಾಮಧೇನು, ಆಕಾಶಕ್ಕೆ ಮುತ್ತಿಡುವ ಮರ, ಬಾಲದಲ್ಲಿ ಕಣ್ಣಿರುವ ಹಕ್ಕಿ, ಸಂಜೀವಿನಿ ನದಿ ನಗುನಗುವ ನೀರ ಬೀಳು ಮೊದಲಾದುವೆಲ್ಲ ಇದ್ದವು. ಅಲ್ಲೊಬ್ಬ ರಾಜಕುಮಾರ ಇದ್ದ ಅವನ ಹೆಸರು ಭರತ. ಆ ದೇಶದ ಹೆಸರು ಭಾರತ.

*ಪ್ರಶ್ನೆಗಳು :*

51. "ನನ್ನ ತಾಯೀ, ಓ ನನ್ನ ತಾಯೀ" ಎಂದು ಕೂಗುತ್ತಿದ್ದ ರಾಜ ಯಾರು ?

52. ರಾಜಕುಮಾರನ ಕೂಗನ್ನು ಕೇಳಿದ ಬೆಂಕಿ ಏನೆಂದು ಹೇಳಿತು ?

53. ಭಾರತೀಯರು ಯಾವ ಬಣ್ಣದವರು ?

54. ಭರತಕುಮಾರನ ಕೂಗನ್ನು ಕೇಳಿ ಪ್ರಾಣಿಗಳೂ, ಪಕ್ಷಿಗಳೂ ಏನು ಮಾಡಿದವು ?

55. **ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ :** 1 × 3 = 3

   * ಹಾಸಿಗೆ ಇದ್ದಷ್ಟು ಕಾಲು ಚಾಚು
   * ಬೆಳೆಯುವ ಸಿರಿ ಮೊಳಕೆಯಲ್ಲಿ
   * ತಾಕಳ್ಳ ಪರರ ನಂಬ

56. ನಿಮ್ಮನ್ನು ಮೈಸೂರಿನ ಕುವೆಂಪು ನಗರ ಸರ್ಕಾರಿ ಪ್ರೌಢಶಾಲೆಯ 'ಅನಿಕೇತನ' ಎಂದು ಭಾವಿಸಿಕೊಂಡು ನಿಮ್ಮ ಶಾಲಾ ಶೈಕ್ಷಣಿಕ ಪ್ರವಾಸಕ್ಕೆ ಹಣ ಕಳಿಸುವಂತೆ ತಂದೆಗೆ ಒಂದು ಪತ್ರ ಬರೆಯಿರಿ. $1 \times 4 = 4$

***ಅಥವಾ***

ನಿಮ್ಮನ್ನು ದಾವಣಗೆರೆಯ ಸರ್ಕಾರಿ ಪ್ರೌಢಶಾಲೆಯ 'ತನುಶ್ರೀ' ಎಂದು ಭಾವಿಸಿಕೊಂಡು, ಆರೋಗ್ಯ ತಪಾಸಣೆಯ ಕಾರಣ ನೀಡಿ ಎರಡು ದಿನಗಳ ರಜೆ ಕೊಡುವಂತೆ ವಿನಂತಿಸಿ ಶಾಲೆಯ ಮುಖ್ಯೋಪಾಧ್ಯಾಯರಿಗೊಂದು ಮನವಿಪತ್ರ ಬರೆಯಿರಿ.

57. **ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ :** $1 \times 4 = 4$

* ಹಸಿರು ಪರಿಸರ ರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ
* ದೇಶದ ಪ್ರಗತಿಯಲ್ಲಿ ಯುವಶಕ್ತಿಯ ಪಾತ್ರ
* ದೇಶಾಭಿಮಾನ ಮೂಡಿಸುವಲ್ಲಿ ರಾಷ್ಟ್ರೀಯ ಹಬ್ಬಗಳ ಮಹತ್ವ